

ಹಿಮಶಿಖರದಲ್ಲೂ ಹೂವು!

ಜೀವಸಂಚಾರವಿದೆ. ದೂರ ಮತ್ತು ಮೇಲೆ ಇರುವ ಈ ದೈವಿಕ ಶಿಖರಗಳಿಗಿಂತ, ಕೆಳಗೆ ತಳಗಡೆ ಹತ್ತಿರದ ಗಜಿಬಿಜಿಯ ಮಾನುಷ ಕಣಿವೆಗಳೇ ಮೇಲಲ್ಲವೇ?

ಆದರೆ ಆ 'ಬರಡು' ಎನ್ನಲಾಗುವ ಘಾತಕ ಥಂಡಿಯ ಶಿಲಾಶಿಖರಗಳಲ್ಲೂ ನಿಸರ್ಗದ ವಿಶಿಷ್ಟ ಛಂದವಿದೆ. ಅವು ಎಷ್ಟೇ ಕಂಗೆಡಿಸಲಿ, ಕಣಿವೆಯಲ್ಲಿ ಬೆಳೆದಿರುವ ಹಸಿರುಹೊನ್ನಿಗೆ ಬೇಕಾದ ನೀರು ಅಲ್ಲಿಂದಲೇ ಇಳಿದು ಬಂದಿದ್ದು; ಸೆಟೆದ ಶಿಖರದ ಶುಕ್ರಧಾತು ಕರಕರಗಿ ಹರಿದು ಕಣಿವೆ ಗರ್ಭ ಸೇರಿದ್ದಲ್ಲದೇ ಕಣಿವೆಗೆ ಫಲವಂತಿಕೆಯೆಲ್ಲಿ? ಸಸ್ಯಶಾಮಲೆಯಾದ ಬಯಲಿಗೆ ಬಿಡುಗಡೆಯೆಲ್ಲಿ? ಹಿಮಪಾತವಾದರೆ ಸೇಬಿನ ಬೆಳೆಗೆ, ಕೇಸರಿಯ ಪೈರಿಗೆ ಒಳ್ಳೆಯದಂತೆ.

ಹಿಮಗಾಲದಲ್ಲಿ ಬಿಸಿರಕ್ತದ ಪ್ರವಾಸಿಗರು, ಪ್ರೇಮಿಗಳು, ಜೀವದ ಹಂಗುಬಿಟ್ಟು ಹಿಮಹಾಸಿನ ಮೇಲೆ ಕಾಲಿಗೆ ಜಾರುದಬ್ಬೆ ಕಟ್ಟಿಕೊಂಡು ಜಿಗಿವ ಸ್ಕೈಯಿಂಗ್ ಆಟಗಾರರು ಧಾವಿಸುತ್ತಾರೆ. ಹಾಗೆ ಕಂಡರೆ, ಹಿಮಾಲಯವನ್ನು ಶಿಖರ–ಕಣಿವೆ ಬಯಲು ಎಂದು ಬೇರ್ಪಡಿಸುವುದೇ ತಪ್ಪು. ಅಲ್ಲಿನ ಮರಳುಗಾಡನ್ನು ಏನೂ ಹುಟ್ಟದ ಜಾಗವೆಂದು ಭಾವಿಸಿರುವುದು ನಮ್ಮ ದೃಷ್ಟಿಕೋನದ ದೋಷ.

ಲಡಾಕಿನಲ್ಲಿ, ಭೂತಾನದಲ್ಲಿ ಕೆಂಚುಬಣ್ಣದ ಇವೇ 'ಬರಡು' ಬೆಟ್ಟಗಳ ತೊಡೆಸಂದಿಯಲಿ ನೀಲರಸದಂತೆ ಹರಿವ ಹೊಳೆಗಳು ಎಷ್ಟೊಂದು ಮೋಹಕವಾಗಿವೆ. ಒಮ್ಮೆ ಇರಾನಿನಲ್ಲಿ ನಾವು ಮರುಭೂಮಿಯ ಪಯಣ ಮಾಡಬೇಕಾಯಿತು. ರಾತ್ರಿ ಬಸ್ತಾಮ್ ಎಂಬ ಊರಲ್ಲಿ ವಸ್ತಿ ಮಾಡಿದೆವು. ಜಗತ್ತಿನ ಸೂಫಿಸಂತರಿಗೆಲ್ಲ ಪ್ರಿಯವಾದ ಬಯಾಜಿದ್ ಬಸ್ತಾಮಿ ಎಂಬ ದಾರ್ಶನಿಕನ ಸಮಾಧಿ ಇರುವ ಊರಿದು. ಹಕ್ಕಿಗಳ ಚಿಲಿಪಿಲಿಗೆ ನಸುಕಿಗೇ ಎಚ್ಚರವಾಯಿತು. ಎದ್ದು ಹೋಟೆಲಿನ ಟೆರೇಸಿನ ಮೇಲೆ ಹೋದೆ. ಸುತ್ತ ಮರುಭೂಮಿಯಿಂದಲೇ ಮಾಡಿದ ಮಣ್ಣ ಪರ್ವತಗಳು. ಅವುಗಳ ಮೇಲೆ ಮಂಡಕ್ಕಿ ಚೆಲ್ಲಿದಂತೆ ಹಿಮ. ನಂಬಲಾಗಲಿಲ್ಲ. ಅಲ್ಲಿಂದ ಹರಿದು ಬರುವ ಜಲವು ಇಡೀ ಬಸ್ತಾಂ ಪ್ರಾಂತ್ಯದ ಮರುಭೂಮಿಯನ್ನು ಹಸಿರು ಮಾಡಿತ್ತು. ಅದಾದರೊ, ಜಡ ಸಂಪ್ರದಾಯದಿಂದ ಬರಡಾದ ಮಾನವರೆದೆಗಳಲ್ಲಿ ಸೂಫಿಗಳು, ತಮ್ಮ ಪ್ರೇಮದ ಅಂತರ್ಜಲ ಹರಿಸಿ ಕಾವ್ಯ ದರ್ಶನಗಳ ಪೈರನ್ನು ಬೆಳೆದು ಆಬಾದುಗೊಳಿಸಿದಂತೆ ತೋರಿತು.

ಇಂತಹ ಧೀಮಂತ ಹಿಮಾಲಯ ಪರ್ವತಗಳು ನಿರಂತರ ಕುಸಿಯುತ್ತಿವೆ. ಅವು ನಮ್ಮ ಕಡೆಯ ಗುಡ್ಡಬೆಟ್ಟಗಳಷ್ಟು ಗಟ್ಟಿಯಲ್ಲ. ಯಾರೋ ಅವಸರದಲ್ಲಿ ಮಣ್ಣು–ಕಲ್ಲು





ಹೂಬಿಟ್ಟ ಮರ ಮತ್ತು ಕಣಿವೆಗೆ ಮರುಳಾಗಿ ಮೈಮರೆತಿರುವ ಲೇಖಕ